**CrlMisc. 39/2017** **PW-1**

**ಸಾಕ್ಷಿದಾರರನ್ನು ದಿಃ 11.10.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎಸ್.ವಿ ವಕೀಲ ರವರಿಂದಃ**

ನಿಮ್ಮ ಮತ್ತು ಎದುರುದಾರರ ನಡುವೆ ಹಿಂದೂ ಸಂಪ್ರದಾಯದಂತೆ ಕೆಂಡಗಣ್ಣಸ್ವಾಮಿ ಗದ್ದಿಗೆಯಲ್ಲಿ ಆಗಿರುತ್ತದೆ ಎಂದು ತಾವು ಹೇಳಿದ್ದು, ಕೆಂಡಗಣ್ಣಸ್ವಾಮಿ ಗದ್ದಿಗೆ ಯಾವ ಊರು, ಯಾವ ತಾಲ್ಲೂಕು ಮತ್ತು ಯಾವ ಜಿಲ್ಲೆಯಲ್ಲಿದೆ ಎಂದರೆ ಸಾಕ್ಷಿಯು ಹೆಚ್.ಡಿ.ಕೋಟೆ ತಾಲ್ಲೂಕಿನ ಗದ್ದಿಗೆ ಗ್ರಾಮದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ.

ನಿಮ್ಮ ಮತ್ತು ಎದುರುದಾರರ ನಡುವೆ ವಿವಾಹ ಆಗಿರುತ್ತದೆ ಎಂದು ತಾವು ಹೇಳಿದ್ದು, ವಿವಾಹದ ಸಂದರ್ಭದಲ್ಲಿ ಯಾರು ಯಾರು ಇದ್ದರು ಎಂದು ಕೇಳಲಾಗಿ ಸಾಕ್ಷಿಯು ನನ್ನ ಕಡೆಯಿಂದ ನಾನು ಒಬ್ಬಳೆ, ಎದುರುದಾರರ ಕಡೆಯಿಂದ ಎದುರುದಾರರು ಮತ್ತು ಅವರು ಮೂರು ಜನ ಸ್ನೇಹಿತರು ಇದ್ದರು. ಎದುರುದಾರರ ಸ್ನೇಹಿತರ ಹೆಸರು ನನಗೆ ಗೊತ್ತಿಲ್ಲ. ಕೆಂಡಗಣ್ಣಸ್ವಾಮಿ ಗದ್ದಿಗೆ ದೇವಸ್ಥಾನದಲ್ಲಿ ನಿಮ್ಮ ಮತ್ತು ಎದುರುದಾರರ ನಡುವೆ ಮದುವೆಯಾಗಿರುತ್ತದೆ ಎಂದು ಹೇಳಿದ್ದು, ಮದುವೆಯನ್ನು ಯಾರು ಮಾಡಿಸಿರುತ್ತಾರೆ ಎಂದು ಕೇಳಲಾಗಿ ಸಾಕ್ಷಿಯು ಆ ದೇವಸ್ಥಾನ ಪೂಜಾರಿಗಳು ಮದುವೆ ಮಾಡಿಸಿರುತ್ತಾರೆ ಅವರು ಹೆಸರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಪೂಜಾರಿಯವರನ್ನು ಈ ಕೇಸಿನಲ್ಲಿ ಸಾಕ್ಷಿ ಮಾಡಲು ತೊಂದರೆ ಇದೆಯಾ ಎಂದು ಕೇಳಲಾಗಿ ಸಾಕ್ಷಿಯು ಈ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ ವಿವಾಹದ ಸಂದರ್ಭದಲ್ಲಿ ಫೋಟೋಗಳನ್ನು ತೆಗೆಯುತ್ತಾರೆ ಎಂದರೆ ಸರಿ . ನೀವು ಮತ್ತು ಎದುರುದಾರರ ಮದುವೆಯಾಗುವ ಸಂದರ್ಭದಲ್ಲಿ ಫೋಟೋವನ್ನು ತೆಗೆಸಿರುತ್ತೀರಾ ಎಂದು ಸಾಕ್ಷಿಯು ತೆಗೆಸಿರುತ್ತೇವೆ, ನನ್ನ ಬಳಿ ಇರುತ್ತವೆ ಎಂದು ನುಡಿಯುತ್ತಾರೆ. ಮುಂದಿನ ದಿನಗಳಲ್ಲಿ ಸದರಿ ಫೋಟೋಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ . ನನ್ನ ಮತ್ತು ಎದುರುದಾರರ ನಡುವೆ ಆದ ವಿವಾಹಕ್ಕೆ ಲಗ್ನಪತ್ರಿಕೆಯನ್ನು ಮಾಡಿಸಿಲ್ಲ.

ದೇವಸ್ಥಾನಗಳಲ್ಲಿ ಮದುವೆಯಾದರೆ ದೇವಸ್ಥಾನದ ಆಡಳಿತ ಮಂಡಳಿಯಲ್ಲಿ ಮದುವೆಯ ಸಂಬಂಧ ನೊಂದಾವಣೆ ಮಾಡಿ ಮದುವೆಯಾಗಿರುವ ಬಗ್ಗೆ ದಾಖಲೆ ಕೊಡುತ್ತಾರೆ ಎಂದರೆ ಸರಿ . ಈ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿ .

ನಿಮ್ಮ ಮತ್ತು ಎದುರುದಾರರ ವೈವಾಹಿಕ ಜೀವನದ ಸಂಬಂಧ ಎರಡನೇ ಅರ್ಜಿದಾರರು ಜನಿಸಿರುತ್ತಾರೆ ಎಂದು ತಾವು ಹೇಳಿದ್ದು, ಎರಡನೇ ಅರ್ಜಿದಾರರು ಎಲ್ಲಿ ಜನಿಸಿರುತ್ತಾರೆ ಎಂದು ಕೇಳಲಾಗಿ ಸಾಕ್ಷಿಯು ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಜನಿಸಿರುತ್ತಾರೆ ಎಂದು ನುಡಿಯುತ್ತಾರೆ. ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಮಕ್ಕಳು ಜನಿಸಿದರೆ ಮೈಸೂರಿನ ಕಾರ್ಪೋರೇಷನ್ ಕಛೇರಿಯಲ್ಲಿ ಜನನ ಪ್ರಮಾಣಪತ್ರ ನೀಡುತ್ತಾರೆ ಎಂದರೆ ಸರಿ . ಸದರಿ ಎರಡನೇ ಅರ್ಜಿದಾರರ ಜನನ ಪ್ರಮಾಣ ಪತ್ರವನ್ನು ಮುಂದಿನ ದಿನಗಳಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ.

ಎರಡನೇ ಅರ್ಜಿದಾರರು ಪ್ರಸ್ತುತ ಹೆಚ್.ಡಿ.ಕೋಟೆಯಲ್ಲಿರುವ ಸೇಂಟ್ ಮೇರೀಸ್ ಶಾಲೆಯಲ್ಲಿ 9 ನೇ ತರಗತಿಯಲ್ಲಿ ಓದುತ್ತಿರುತ್ತಾರೆ. ಸೇಂಟ್ ಮೇರೀಸ್ ಶಾಲೆಗೆ ಎರಡನೇ ಅರ್ಜಿದಾರರನ್ನು 5 ನೇ ತರಗತಿಯಿಂದ ದಾಖಲು ಮಾಡಿರುತ್ತೇನೆ. ಎರಡನೇ ಅರ್ಜಿದಾರರು 1 ರಿಂದ 4 ನೇ ತರಗತಿಯನ್ನು ಹೊನ್ನಮ್ಮನಕಟ್ಟೆ ಗ್ರಾಮದಲ್ಲಿರುವ ಸೇಂಟ್ ಮೇರೀಸ್ ಶಾಲೆಯಲ್ಲಿ ಓದಿರುತ್ತಾರೆ.

ಹೊನ್ನಮ್ಮನಕಟ್ಟೆ ಗ್ರಾಮದಲ್ಲಿರುವ ಸೇಂಟ್ ಮೇರೀಸ್ ಶಾಲೆಯಿಂದ ಎರಡನೇ ಅರ್ಜಿದಾರರನ್ನು ಹೆಚ್.ಡಿ.ಕೋಟೆಯ ಸೇಂಟ್ ಮೇರೀಸ್ ಶಾಲೆಗೆ ಸೇರಿಸುವ ಸಂದರ್ಭದಲ್ಲಿ ಎರಡನೇ ಅರ್ಜಿದಾರರ ವರ್ಗಾವಣೆ ಪ್ರಮಾಣ ಪತ್ರ (ಟಿ.ಸಿ) ಯನ್ನು ಹಾಜರುಪಡಿಸಿರುತ್ತೀರಾ ಎಂದು ಕೇಳಲಾಗಿ ಸಾಕ್ಷಿಯು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-4 ದಾಖಲೆಯಲ್ಲಿ ಹೆಚ್.ಡಿ.ಕೋಟೆಯ ಸೇಂಟ್ ಮೇರೀಸ್ ಶಾಲೆಯವರು ಈ ಹಿಂದೆ ವಿದ್ಯಾರ್ಥಿಯು ಅಂದರೆ ಎರಡನೇ ಅರ್ಜಿದಾರರು ತಾನು ಬಿಟ್ಟ ಶಾಲೆಯಿಂದ ವರ್ಗಾವಣೆ ಪತ್ರ ಹಾಜರುಪಡಿಸಿದ್ದಾರೆಯೇ ಎಂಬ ಕಾಲಂನಲ್ಲಿ ಖಾಲಿ ಬಿಟ್ಟಿರುತ್ತಾರೆ ಎಂದರೆ ಸರಿ. ಹೆಚ್.ಡಿ.ಕೋಟೆಯ ಸೇಂಟ್ ಮೇರೀಸ್ ಶಾಲೆಗೆ ಎರಡನೇ ಅರ್ಜಿದಾರರನ್ನು ಶಾಲೆಗೆ ದಾಖಲಾತಿ ಮಾಡುವ ಸಂದರ್ಭದಲ್ಲಿ ಎರಡನೇ ಅರ್ಜಿದಾರರು ಹೊನ್ನಮ್ಮನಕಟ್ಟೆ ಗ್ರಾಮದ ಸೇಂಟ್ ಮೇರೀಸ್ ಶಾಲೆಯಿಂದ ಟಿ.ಸಿ ಯನ್ನು ಹಾಜರು ಮಾಡದೇ ಇದ್ದುದ್ದರಿಂದ ಹೆಚ್.ಡಿ.ಕೋಟೆಯ ಸೇಂಟ್ ಮೇರೀಸ್ ಶಾಲೆಯವರು ಸದರಿ ನಿಪಿ-4 ಕ್ರಸಂ. 7 ರಲ್ಲಿ ಖಾಲಿ ಬಿಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಾನು ಹಾಜರು ಮಾಡಿದ್ದೆ ಎಂದು ನುಡಿಯುತ್ತಾರೆ.

ಹೆಚ್.ಡಿ.ಕೋಟೆಯ ಸೇಂಟ್ ಮೇರೀಶ್ ಶಾಲೆಯವರು ನೀಡಿದ ನಿಪಿ-4 ಕ್ರ.ಸಂ.8 ರಲ್ಲಿ ವಿದ್ಯಾರ್ಥಿಯು ಹಿಂದೆ ಓದುತ್ತಿದ್ದ ಶಾಲೆಯ ಹೆಸರು ಮತ್ತು ತರಗತಿಯನ್ನು ಖಾಲಿ ಬಿಟ್ಟಿರುತ್ತಾರೆ ಎಂದರೆ ಸರಿ. ನಿಪಿ-4 ಕ್ರಮ ಸಂಖ್ಯೆ 1 ರಲ್ಲಿ ಯಾವುದೇ ಕ್ರಮ ಸಂಖ್ಯೆ ನಮೂದು ಮಾಡಿಲ್ಲ ಎಂದರೆ ಸರಿ . ನಿಪಿ-4 ದಾಖಲೆಯಲ್ಲಿ ಕ್ರ.ಸಂಃ 1, 7 ಮತ್ತು 8 ನ್ನು ಹೆಚ್.ಡಿ.ಕೋಟೆಯ ಸೇಂಟ್ ಮೇರೀಸ್ ಶಾಲೆಯವರು ಏಕೆ ಖಾಲಿ ಬಿಟ್ಟಿರುತ್ತಾರೆ ಎಂದರೆ ತಾವು ಸದರಿ ದಾಖಲೆಯನ್ನು ಎದುರುದಾರರ ವಿರುದ್ಧ ಪ್ರಸ್ತುತ ಅರ್ಜಿಯನ್ನು ಸಲ್ಲಿಸಲು ಸೃಷ್ಟಿ ಮಾಡಿಕೊಂಡಿರುವುದರಿಂದ ಸದರಿ ಕ್ರ.ಸಂಃ 1, 7 ಮತ್ತು 8 ನ್ನು ಖಾಲಿ ಬಿಡಲಾಗಿರುತ್ತದೆ ಎಂದರೆ ಸರಿಯಲ್ಲ.

ಎದುರುದಾರರು ಪ್ರತಿದಿನ ಮದ್ಯಪಾನ ಸೇವಿಸಿ ಮನೆಗೆ ಬಂದು ದೈಹಿಕ ಮತ್ತು ಮಾನಸಿಕ ಹಿಂಸೆ ಕೊಡುತ್ತಿದ್ದರು ಎಂದು ಅರ್ಜಿಯಲ್ಲಿ ಹೇಳಿರುತ್ತೇನೆ ಎಂದರೆ ಸರಿ . ಈ ಸಂಬಂಧ ತಾವು ಏನಾದರೂ ಎದುರುದಾರರ ವಿರುದ್ಧ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದೀರಾ ಎಂದು ಕೇಳಲಾಗಿ ಸಾಕ್ಷಿಯು ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಸದರಿ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದು ಕೇಳಲಾಗಿ ಸಾಕ್ಷಿಯು ಹಾಜರು ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

ಎದುರುದಾರರು ಮದ್ಯಪಾನ ಸೇವಿಸಿ ಬಂದು ನನಗೆ ದೈಹಿಕ, ಮಾನಸಿಕ ಹಿಂಸೆ ಕೊಟ್ಟಿಲ್ಲ, ನಾನು ಪೊಲೀಸ್ ಠಾಣೆಯಲ್ಲಿ ಯಾವುದೇ ದೂರು ಕೊಟ್ಟಿಲ್ಲ, ಕಾರಣ ಎದುರುದಾರರಿಗೂ ಮತ್ತುನನಗೂ ಯಾವುದೇ ರೀತಿಯಿಂದಲೂ ಗಂಡ ಹೆಂಡತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಎದುರುದಾರರ ದರ್ಗಾ ಗ್ರಾಮದ ಶಾಂತ ಎಂಬುವವರೊಂದಿಗೆ ಅನೈತಿಕ ಸಂಬಂಧವನ್ನು ಇಟ್ಟುಕೊಂಡಿದ್ದರು ಎಂದು ತಮ್ಮ ಅರ್ಜಿಯಲ್ಲಿ ಹೇಳಿದ್ದು, ಈ ಸಂಬಂಧ ನ್ಯಾಯಾಲಯಕ್ಕೆ ದಾಖಲೆಗಳನ್ನು

ಹಾಜರು ಮಾಡಿರುತ್ತೀರಾ ಎಂದು ಕೇಳಲಾಗಿ ಸಾಕ್ಷಿಯು ಹಾಜರು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಎದುರುದಾರರ ಶಾಂತ ಎಂಬುವವರೊಂದಿಗೆ ಅನೈತಿಕ ಸಂಬಂಧ ಇಟ್ಟುಕೊಂಡಿದ್ದರು ಎಂದು ತಾವು ಹೇಳಿದ್ದು, ಈ ಸಂಬಂಧ ಪೊಲೀಸ್ ಪಿರ್ಯಾದು ಏನಾದರೂ ಕೊಟ್ಟಿದ್ದೀರಾ ಎಂದು ಕೇಳಲಾಗಿ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಪೊಲೀಸ್ ಠಾಣೆಗೆ ದೂರು ಸಲ್ಲಿಸಲು ತಮಗೆ ತೊಂದರೆ ಇತ್ತಾ ಎಂದು ಕೇಳಲಾಗಿ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಎದುರುದಾರರಿಗೆ ಶಾಂತ ಎಂಬುವವರೊಂದಿಗೆ ಯಾವುದೇ ಅನೈತಿಕ ಸಂಬಂಧ ಇರಲಿಲ್ಲ ಅರ್ಜಿಯನ್ನು ಸಲ್ಲಿಸುವ ನೆಪಮಾತ್ರಕ್ಕೆ ಸುಳ್ಳು ಆರೋಪ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಅರ್ಜಿಯಲ್ಲಿ ನನಗೆ ಥೈರಾಯಿಡ್ ಸಮಸ್ಯೆ ಮತ್ತು ಎರಡನೇ ಅರ್ಜಿದಾರರಿಗೆ ಅಸ್ತಮ ಸಮಸ್ಯೆ ಇದ್ದು, ತುಂಬಾ ಹಣ ಬೇಕಾಗುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿ . ನನಗೆ ಥೈರಾಯಿಡ್ ಸಮಸ್ಯೆ ಮತ್ತು ಎರಡನೇ ಅರ್ಜಿದಾರರಿಗೆ ಅಸ್ತಮ ಸಮಸ್ಯೆ ಇರುವ ಬಗ್ಗೆ ವೈದ್ಯಕೀಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿ . ಸದರಿ ವೈದ್ಯಕೀಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ . ನನಗೆ ಮತ್ತು ಎರಡನೇ ಅರ್ಜಿದಾರರಿಗೆ ಯಾವುದೇ ಆರೋಗ್ಯದ ಸಮಸ್ಯೆ ಇಲ್ಲದೆ ಇರುವುದರಿಂದ ನ್ಯಾಯಾಲಯಕ್ಕೆ ವೈದ್ಯಕೀಯ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

ಎದುರುದಾರರು ವಾಹನ ಚಾಲಕ ಇರುತ್ತಾರೆ ಎಂದು ಹೇಳಿದ್ದು, ಯಾವ ವಾಹನವನ್ನು ಚಲಾಯಿಸುತ್ತಾರೆ ಎಂದು ಕೇಳಲಾಗಿ ಸಾಕ್ಷಿಯು ಟೆಂಪೋ ಎಂದು ನುಡಿಯುತ್ತಾರೆ. ಎದುರುದಾರರು ಯಾವುದೇ ಟೆಂಪೋ ಚಲಾಯಿಸುತ್ತಿರುವುದಿಲ್ಲ ಮತ್ತು ಅದರಿಂದ ಮಾಸಿಕ ಇಪ್ಪರಿಂದ ಮೂವತ್ತು ಸಾವಿರ ಹಣ ಬರುತ್ತಿಲ್ಲ ಎಂದರೆ ಸರಿಯಲ್ಲ. ಎದುರುದಾರರಿಗೆ ಚಿಕ್ಕಕೆರೆಯೂರು ಗ್ರಾಮದಲ್ಲಿ ಒಂದು ಮನೆ ಮತ್ತು ನಿವೇಶನ ಇರುತ್ತದೆ ಎಂದು ತಮ್ಮ ಅರ್ಜಿಯಲ್ಲಿ ಹೇಳಿದ್ದು ಈ ಸಂಬಂಧ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಮಾಡಿರುತ್ತೀರಾ ಎಂದು ಕೇಳಲಾಗಿ ಸಾಕ್ಷಿಯು ಇಲ್ಲಾ ಎನ್ನುತ್ತಾರೆ.

ನನಗೂ ಮತ್ತು ಎದುರುದಾರರಿಗೂ ಯಾವುದೇ ರೀತಿಯಲ್ಲಿ ಗಂಡ ಹೆಂಡತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ನಾನು ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಹಿಂದೆ ತಾವು ಪಾಟೀ ಸವಾಲಿಗೆ ಒಳಗಾದಾಗ ಮುಖ್ಯ ವಿಚಾರಣೆ ಪ್ರಮಾಣ ಪತ್ರ ತಯಾರು ಮಾಡಲು ವಕೀಲರಿಗೆ ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದು ಕೇಳಿದಾಗ ತಾವು ಮಹಿಳಾ ಸಂಘದವರು ಮಾಹಿತಿ ಕೊಟ್ಟಿರುತ್ತಾರೆ ಎಂದು ಹೇಳಿದ್ದು ಯಾವ ಮಹಿಳಾ ಸಂಘ ಎಂದು ಕೇಳಲಾಗಿ ಸಾಕ್ಷಿಯು ಹೆಚ್.ಡಿ.ಕೋಟೆ ಯ ಗೋಡೋನ್ ಹಿಂಭಾಗ ಇರುವ ಮಹಿಳಾ ಸಂಘ ಎಂದು ನುಡಿಯುತ್ತಾರೆ. ಸಂಘದಿಂದ ಯಾರು ಬಂದಿದ್ದರು, ಅವರು ಹೆಸರೇನು , ಹುದ್ದೆ ಏನು ಎಂದು ಕೇಳಲಾಗಿ ಸಾಕ್ಷಿಯು ಅವರ ಹೆಸರು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

ನಾನು ಎದುರುದಾರರ ಹೆಂಡತಿ ಮತ್ತು ಎರಡನೇ ಅರ್ಜಿದಾರರು ನಮ್ಮಿಬ್ಬರ ಮಗಳು ಎಂದು ಎದುರುದಾರರಿಂದ ಹಣ ವಸೂಲಿ ಮಾಡಲು ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ಕೇಳಿರುವ ಪರಿಹಾರ ಪಡೆಯಲು ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ಸಾಕ್ಷಿದಾರರ  ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಸ ಇ ಒ.,**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು  ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**